ಉಚಿತ ಆಂಬುಲೆನ್ಸ್ ನೀಡಿಕೆ

ಕೆ.ಆರ್. ಪುರ,ಆ.20– ಕರೋನದಿಂದ ಉಂಟಾಗಿರುವ ಆರೋಗ್ಯ ತುರ್ತುಪರಿಸ್ಥಿತಿಯ ಸಮಯದಲ್ಲಿ ಸಾರ್ವಜನಿಕರಿಗೆ ಅನುಕೂಲಕ್ಕಾಗಿ ಈ.ಎಲ್.ವಿ ಗ್ರೂಪ್ ಹಾಗೂ ದಿ ಪ್ರೋಡಿಜೀಸ್ ಇಂಟರ್ನ್ಯಾಷನಲ್ ಸ್ಕೂಲ್ ಛೇರ್ಮನ್ ಭಾಸ್ಕರ್ ಉಚಿತ ಆಂಬುಲೆನ್ಸ್ ನೀಡಿದರು.

ಮಹದೇವಪುರ ಕ್ಷೇತ್ರದ ವರ್ತೂರು ಬಳಿಯ ತಮ್ಮ ಕಚೇರಿಯಲ್ಲಿ ಉಚಿತ ಸೇವೆಗೆ ಅಂಬುಲೆನ್ಸ್ ನೀಡಿ ಮಾತನಾಡಿದ ಅವರು ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಸಮಾಜ ಸೇವೆ ಮಾಡುವಂತೆ ಮನವಿ ಮಾಡಿದರು.

ಉದ್ಯಮಿಗಳು ಆದಾಯದಲ್ಲಿ ಒಂದು ಭಾಗವನ್ನು ಸಮಾಜದ ಅಭಿವೃದ್ಧಿಗೆ ನೀಡಿದ್ದಲ್ಲಿ ಸರ್ವತೋಮುಖ ಪ್ರಗತಿ ಸಾಧ್ಯವಾಗಲಿದೆ ಎಂದು ನುಡಿದರು.

ಸ್ಥಳೀಯ ಶಾಸಕ ಅರವಿಂದ್ ಲಿಂಬಾವಳಿರವರು ಮಾಡುತ್ತಿರುವ ಸಮಾಜಮುಖಿ ಕಾರ್ಯಕ್ರಮಗಳೆ ತಮಗೆ ಸ್ಫೂರ್ತಿಯಾಗಿದ್ದು ಅವರ ಹಾದಿಯನ್ನು ನಾವೆಲ್ಲಾ ಅನುಸರಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಲ್. ರಾಜೇಶ್, ಇ.ಎಲ್.ವಿ ಗ್ರೂಪ್ ವೈಸ್ ಚೇರ್ಮನ್ ವೀರ ಕುಮಾರ್ ರೆಡ್ಡಿ, ನಿರ್ದೇಶಕರಾದ ರೆಡ್ಡಿ, ಸುರೇಶ್ ಬಾಬು, ವಿವೇಕ್, ವೆಂಕಟ ಕಿರಣ್, ಸುಬ್ಬಾ ರಾವ್ ಸೇರಿದಂತೆ ಹಲವಾರು ಹಾಜರಿದ್ದರು.

ಮಹದೇವಪುರ ಕ್ಷೇತ್ರದ ವರ್ತೂರು ಸಮೀಪದ ಕಚೇರಿಯಲ್ಲಿ ಉಚಿತ ಅಂಬುಲೆನ್ಸ್ ಸೇವೆಗೆ ಇ.ಎಲ್.ವಿ ಸಂಸ್ಥೆಯ ಅಧ್ಯಕ್ಷ ಭಾಸ್ಕರ್ ಅವರು ಚಾಲನೆ ನೀಡಿದರು.

ಒಂದೇ ದಿನದಲ್ಲಿ 54 ಲಕ್ಷ ಮಂದಿಗೆ ಲಸಿಕೆ

ನವದೆಹಲಿ, ಆ.20– ದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 54 ಲಕ್ಷಕ್ಕೂ ಅಧಿಕ ಮಂದಿ ಲಸಿಕೆ ಹಾಕಲಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

ಇದರೊಂದಿಗೆ ದೇಶದಲ್ಲಿ ಒಟ್ಟಾರೆಯಾಗಿ 57.22 ಕೋಟಿ ಜನರಿಗೆ ಲಸಿಕೆಯ ಹಾಕಿರುವುದಾಗಿ ತಿಳಿಸಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ 54,71,282 ಡೋಸ್ ಲಸಿಕೆ ನೀಡಲಾಗಿದೆ. ಇದರೊಂದಿಗೆ ದಿನದಿಂದ ದಿನಕ್ಕೆ ಲಸಿಕೆ ನೀಡಿಕೆಯ ಪ್ರಮಾಣವನ್ನು ದೇಶಾದ್ಯಂತ ಹೆಚ್ಚು ಮಾಡಲಾಗುತ್ತದೆ ಎಂದು ಸಚಿವಾಲಯ ತನ್ನ ಅಧಿಕೃತ ಮಾಹಿತಿಯನ್ನು ತಿಳಿಸಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಜನಸಂಖ್ಯೆ ಮತ್ತು ಕೊರೊನಾ ಸೋಂಕಿತರ ಬೇಡಿಕೆಗೆ ಅನುಗುಣವಾಗಿ ಲಸಿಕೆಯನ್ನು ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಲಾಗಿದೆ.

ದೇಶದಲ್ಲಿ ಔಷಧ ತಯಾರಿಕಾ ಸಂಸ್ಥೆಗಳು ಉತ್ಪಾದನೆ ಮಾಡುವ ಒಟ್ಟಾರೆ ಲಸಿಕೆಯ ಬಗ್ಗೆ ಶೇಕಡ 75ರಷ್ಟು ಲಸಿಕೆಯನ್ನು ಕೇಂದ್ರ ಸರ್ಕಾರ ಖರೀದಿ ಮಾಡಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಉಚಿತವಾಗಿ ಪೂರೈಕೆ ಮಾಡುತ್ತಿದೆ.

ಇನ್ನೂ ಶೇಕಡ 25ರಷ್ಟು ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳು ಮತ್ತು ರಾಜ್ಯಗಳು ತಮ್ಮ ಬೇಡಿಕೆಗೆ ಅನುಗುಣವಾಗಿ ಔಷಧ ತಯಾರಿಕಾ ಸಂಸ್ಥೆಗಳು ಎಲ್ಲಾ ಖರೀದಿ ಮಾಡಲು ಅವಕಾಶ ಮಾಡಿಕೊಡಲಾಗಿದೆ

ರಾಜಭವನದಲ್ಲಿ ತಂಗಿರುವ ಉಪರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಅವರನ್ನು ತೆಲುಗು ವಿಜ್ಞಾನ ಸಮಿತಿಯ ಅಧ್ಯಕ್ಷ ಡಾ. ಎ. ರಾಧಾಕೃಷ್ಣ ರಾಜು, ಉಪಾಧ್ಯಕ್ಷರುಗಳಾದ ಕೆ. ಗಂಗರಾಜು, ಆದಿಕೇಶವಲು ನಾಯ್ಡು, ಖಜಾಂಚಿ ವರದರಾಜು ಅವರು ಭೇಟಿ ಮಾಡಿ ಹಲವು ಬೇಡಿಕೆ ಕುರಿತು ಮನವಿ ಮಾಡಿದರು.

ಕಾರು ಸ್ಫೋಟ-ನಾಲ್ವರ ಬಂಧನ

ಕನಕಪುರ.ಆ20:ಇತ್ತೀಚೆಗೆ ಮರಳೇಗವಿ ಮಠದ ಪಕ್ಕದಲ್ಲಿ ಬ್ಲಾಸ್ಟಿಂಗ್ ಮೆಟೀರಿಯಲ್‌ನಿಂದ ಕಾರು ಸ್ಫೋಟಗೊಂಡು ಮಹೇಶ್ ಎಂಬುವರು ಮೃತಪಟ್ಟಿದ್ದ ಘಟನೆಗೆ ಸಂಬಂಧಿಸಿದಂತೆ ತೀವ್ರ ತನಿಖೆ ನಡೆಸುತ್ತಿರುವ ಕನಕಪುರ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ಜಿಲೇಟಿನ್ ಸ್ಫೋಟದಿಂದ ಕಾರು ಸ್ಫೋಟಗೊಂಡಿರುವುದು ಪ್ರಾಥಮಿಕ ತನಿಖೆಯಲ್ಲಿ ಧೃಡಪಟ್ಟಿದ್ದು ಸ್ಫೋಟಕ ವಸ್ತುಗಳ ಮಾರಾಟ ಮಾಡಲು ಅಧಿಕೃತ ಪರವಾನಗಿ ಪಡೆತ್ತಿದ್ದವರು ಮತ್ತು ಅದನ್ನು ಪೂರೈಕೆ ಮಾಡುತ್ತಿದ್ದವರನ್ನು ವಶಕ್ಕೆ ಪಡೆದಿದ್ದು, ಪೊಲೀಸರು ಹೆಚ್ಚಿನ ವಿಚಾರಣೆ ನಡೆಸುತ್ತಿರುವುದಾಗಿ ತಿಳಿದು ಬಂದಿದೆ.

ಬೈಕ್‌ಗೆ ಟ್ಯಾಕ್ಟರ್ ಡಿಕ್ಕಿ-ಸವಾರ ಸಾವು

ಮುಳಬಾಗಿಲು ಆ 19: ರಾ.ಹೆ 234ರ ಶ್ರೀನಿವಾಸಪುರ ರಸ್ತೆಯ ಬೇವಹಳ್ಳಿಗೇಟ್ ಬಳಿ ರಸ್ತೆಯಲ್ಲಿ ನೀಲಗಿರಿ ಕಂಬಗಳನ್ನು ತುಂಬಿಕೊಂಡು ಕೆಟ್ಟುನಿಂತಿದ್ದ ಟ್ರಾಕ್ಟರ್‌ಗೆ ಹಿಂಬದಿಯಿಂದ ಬಂದು ಬುಧವಾರ ರಾತ್ರಿ 12ಗಂಟೆಯಲ್ಲಿ ಡಿಕ್ಕಿ ಹೊಡೆದ ದ್ವಿಚಕ್ರವಾಹನ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು ಮತ್ತೊಬ್ಬ ವಾಹನ ಸವಾರ ತೀವ್ರವಾಗಿ ಗಾಯಗೊಂಡ ಘಟನೆ ನಡೆದಿದೆ.

ಮುಳಬಾಗಿಲಿನ ಕುರುಬರಪೇಟ್ ನಿವಾಸಿಗಳಾದ ಮಹೇಶ್ (35) ಮೃತ ದುರ್ದೈವಿಯಾಗಿದ್ದಾನೆ, ನಾಗರಾಜ್ (50) ತೀವ್ರವಾಗಿ ಗಾಯಗೊಂಡಿದ್ದು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಶ್ರೀನಿವಾಸಪುರ ತಾಲೂಕಿನ ಚೊಕ್ಕನಹಳ್ಳಿ ಗ್ರಾಮದಲ್ಲಿ ಸ್ನೇಹಿತರ ಆಹ್ವಾನದ ಮೇರೆಗೆ ಮೊಹರಂ ಹಬ್ಬಕ್ಕೆ ಹೋಗಿ ರಾತ್ರಿ ವಾಪಸ್ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ, ಈ ಬಗ್ಗೆ ಮುಳಬಾಗಿಲು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯ ಚಿನ್ನಾಭರಣ ಅಪಹರಣ

ಶಿವಮೊಗ್ಗ, ಆ. 20: ತೋಟದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೋರ್ವರ ಕಣ್ಣಿಗೆ ಪೌಡರ್ ಎರಚಿ ಚಿನ್ನಾಭರಣ ಅಪಹರಿಸಿ ಕಳ್ಳರು ಪರಾರಿಯಾಗಿರುವ ಘಟನೆ ಶಿವಮೊಗ್ಗ ತಾಲೂಕಿನ ಹೊಸಮನೆ ತಾಂಡಾದಲ್ಲಿ ಗುರುವಾರ ನಡೆದಿದೆ. ರಾಧಮ್ಮ (38) ಎಂಬುವರೇ ಚಿನ್ನಾಭರಣ ಕಳೆದು ಕೊಂಡ ಮಹಿಳೆ ಯಾಗಿದ್ದಾರೆ. ಇವರು ತೋಟದಲ್ಲಿ ಕೆಲಸ ಮಾಡುವಾಗ ಹಿಂಬದಿಯಿಂದ ಆಗಮಿಸಿದ ಅಪರಿಚಿತರು ಕಣ್ಣಿಗೆ ಪೌಡರ್ ಎರಚಿದ್ದಾರೆ. ನಂತರ ಅವರ ಮೈಮೇಲಿದ್ದ 30 ಸಾವಿರ ರೂ. ಮೌಲ್ಯದ ಚಿನ್ನಾಭರಣ ಅಪಹರಿಸಿ ಪರಾರಿಯಾಗಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೈಬರ್ ವಂಚನೆ ಲಕ್ಷಾಂತರ ರೂ. ಮೋಸ

ಶಿವಮೊಗ್ಗ, ಆ. 20: ಬ್ಯಾಂಕ್ ಖಾತೆಯಿಂದ ಹಣ ವಂಚಿಸಿದ ಆರೋಪಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಸೈಬರ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ದೂರುಗಳು ದಾಖಲಾಗಿವೆ. ನಕಲಿ ಮ್ಯಾನೇಜರ್: ಭದ್ರಾವತಿ ಪಟ್ಟಣದ ಹುತ್ತಾ ಕಾಲೋನಿಯ ನಿವಾಸಿ, ದೂರುದಾರರಾದ ಅನುರಾಧ ಎಂಬುವರ ಮೊಬೈಲ್ ಗೆ ಇತ್ತೀಚೆಗೆ ಕರೆ ಮಾಡಿದ ವಂಚಕನೋರ್ವ, ಯೂನಿಯನ್ ಬ್ಯಾಂಕ್ ಮ್ಯಾನೇಜರ್ ಎಂದು ಪರಿಚಯಿಸಿಕೊಂಡಿದ್ದ.

'ನಿಮ್ಮ ಬ್ಯಾಂಕ್ ಖಾತೆ ಸ್ಥಗಿತಗೊಂಡಿದ್ದು, ಆಧಾರ್ ಸಂಖ್ಯೆ ನೀಡಿದರೆ ಸಕ್ರಿಯಗೊಳಿಸುವುದಾಗಿ ತಿಳಿಸಿದ್ದು, ಆಧಾರ್ ಸಂಖ್ಯೆಯ ವಿವರ ನೀಡಿದ್ದೆ. ನಂತರ ಮತ್ತೆ ಕರೆ ಮಾಡಿದ ಆರೋಪಿಯು, ನಿಮ್ಮ ಮೊಬೈಲ್ ಗೆ ಬಂದಿರುವ ಓಟಿಪಿ ಸಂಖ್ಯೆ ತಿಳಿಸುವಂತೆ ಹೇಳಿದ್ದ.

ಓಟಿಪಿ ವಿವರ ನೀಡಿದ್ದೆ. ತದನಂತರ ನನ್ನ ಬ್ಯಾಂಕ್ ಖಾತೆಯಿಂದ 79,993 ರೂ. ಡ್ರಾ ಮಾಡಿ ವಂಚಿಸಲಾಗಿದೆ' ಎಂದು ಅನುರಾಧರವರು ಸೈಬರ್ ಠಾಣೆ ಪೊಲೀಸರಿಗೆ ನೀಸಿರುವ ದೂರಿನಲ್ಲಿ ತಿಳಿಸಿದ್ದಾರೆ.

ಹಣ ಡ್ರಾ: ಶಿವಮೊಗ್ಗ ನಗರದ ಗೋಪಿಶೆಟ್ಟಿಕೊಪ್ಪ ಗ್ರಾಮದ ಮಂಜುಳಾರವರು ನಗರದ ಬ್ಯಾಂಕ್ ಆಫ್ ಬರೋಡಾದಲ್ಲಿ ಎಸ್.ಬಿ. ಖಾತೆ ಹೊಂದಿದ್ದರು. 'ತಮ್ಮ ಖಾತೆಯಲ್ಲಿದ್ದ 1,27,288 ರೂ.ಗಳಲ್ಲಿ 1,10,014 ರೂ.ಗಳನ್ನು ಯಾರೋ ಡ್ರಾ ಮಾಡಿ ವಂಚಿಸಿದ್ದಾರೆ' ಎಂದು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ದೂರುದಾರರು ಆರೋಪಿಸಿದ್ದಾರೆ.

ಡೀಸೆಲ್ ಮೇಲಿನ ತೆರಿಗೆ ಇಳಿಕೆಗೆ ಲಾರಿ ಮಾಲೀಕರ ಒತ್ತಾಯ

ತುಮಕೂರು, ಆ. 20– ಡೀಸೆಲ್ ಮೇಲೆ ರಾಜ್ಯ ಸರ್ಕಾರ ವಿಧಿಸುತ್ತಿರುವ 26.50 ರೂ. ತೆರಿಗೆಯನ್ನು ಕಡಿಮೆ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹಾಗೂ ಲಾರಿ ಮಾಲೀಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಫೆಡರೇಶನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ ದಕ್ಷಿಣ ಭಾರತದ ಅಧ್ಯಕ್ಷ ಷಣ್ಮುಖಪ್ಪ ಹೇಳಿದರು.ತುಮಕೂರು ಲಾರಿ ಮಾಲೀಕರ ಸಂಘ ಹಾಗೂ ಫೆಡರೇಶನ್ ಆಫ್ ಕರ್ನಾಟಕ ಲಾರಿ ಓನರ?ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 124ನೇ ಸರ್ವ ಸದಸ್ಯರ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡೀಸೆಲ್ ಮೇಲಿನ ಸೆಸ್ ಕಡಿತ ಮಾಡುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಡೀಸೆಲ್ ರಾಜ್ಯದಲ್ಲಿ ಖರ್ಚಾಗುವುದರಿಂದ ರಾಜ್ಯ ಸರ್ಕಾರಕ್ಕೆ ಆದಾಯವೂ ಬರಲಿದೆ. ಅಲ್ಲದೆ ಲಾರಿ ಮಾಲೀಕರಿಗೂ ಕೊಂಚ ಉಳಿತಾಯವಾಗಲಿದೆ ಎಂದರು.

ಪ್ರಸ್ತುತ ರಾಜ್ಯದಲ್ಲಿ 6 ಲಕ್ಷ ಲಾರಿಗಳಿವೆ. ಇವುಗಳಲ್ಲಿ ದಿನಪ್ರತಿ 40 ಸಾವಿರಕ್ಕೂ ಹೆಚ್ಚು ಲಾರಿಗಳು ಓಡಾಡುತ್ತವೆ. ಒಂದು ಲಾರಿಗೆ ಕನಿಷ್ಠ 200 ಲೀಟರ್ ಡೀಸೆಲ್ ಎಂದರೂ 8 ಲಕ್ಷ ಲೀಟರ್ ಖರ್ಚಾಗಲಿದೆ. ತೆರಿಗೆ ಹೆಚ್ಚಳದಿಂದ ಲಾರಿ ಮಾಲೀಕರು, ನೆರೆಯ ಆಂಧ್ರ, ತಮಿಳುನಾಡು, ಪಾಂಡಿಚೇರಿ, ಮಹಾರಾಷ್ಟ್ರದಲ್ಲಿ ಡಿಸೇಲ್ ತುಂಬಿಸಿಕೊಂಡು ಬರುವುದರಿಂದ ನಮ್ಮ ರಾಜ್ಯದಲ್ಲಿ ಡಿಸೇಲ್ ಖರ್ಚಾಗುವುದು ಕಡಿಮೆ. ಇದು ಸರ್ಕಾರಕ್ಕೂ ನಷ್ಟ, ಲಾರಿ ಮಾಲೀಕರಿಗೂ ನಷ್ಟ ಎಂದು ತಿಳಿಸಿದರು.ಲೋಡ್ ಮತ್ತು ಅನ್‌ಲೋಡ್ ಇವೆರೆಡು ಲಾರಿ ಮಾಲೀಕರಿಗೆ ಸಂಬಂಧಿಸಿದ್ದಲ್ಲ. ಆದರೆ ನಮ್ಮಿಂದಲೇ ಕಟ್ಟಿಸಲಾಗುತ್ತಿದೆ. ಈ ಬಗ್ಗೆ ಹಲವಾರು ಬಾರಿ ಸರ್ಕಾರಕ್ಕೆ, ವಾಣಿಜ್ಯ ವಹಿವಾಟು ನಡೆಸುವ ಸಂಘ ಸಂಸ್ಥೆಗಳ ಮುಖಂಡರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹಾಗಾಗಿ ಸೆಪ್ಟೆಂಬರ್ 1 ರಿಂದ ರಾಜ್ಯಾದ್ಯಂತ ಲೋಡ್ ಮತ್ತು ಅನ್ ಲೋಡಿಂಗ್, ಓವರ್ ಲೋಡ್ ಮಾಡುವುದಿಲ್ಲ ಎಂದು ಇಂದಿನ ಸರ್ವ ಸದಸ್ಯರ ಸಭೆ ನಿರ್ಣಯ ಕೈಗೊಂಡಿದ್ದು, ಸೆಪ್ಟೆಂಬರ್ 1 ರಿಂದ ಲೋಡ್ ಮತ್ತು ಅನ್ ಲೋಡ್‌ಗೆ ಲಾರಿಯವರು ಹಣ ಭರಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಲಾರಿ ಮಾಲೀಕರು ಮತ್ತು ಸರ್ಕಾರಕ್ಕೆ ಓವರ್ ಲೋಡ್ ಎಂಬುದು ಒಂದು ದೊಡ್ಡ ತಲೆನೋವಾಗಿದೆ. ಸರ್ಕಾರವೇ ಓವರ್ ಲೋಡ್‌ಗೆ ಬೆಂಬಲವಾಗಿ ನಿಂತಂತೆ ಕಾಣುತ್ತಿದೆ. ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗುವುದಿಲ್ಲ. ಓವರ್ ಲೋಡ್‌ನಿಂದ ರಸ್ತೆಗಳು ಹಾಳಾಗಲಿವೆ. ಸರ್ಕಾರ ಕೂಡಲೇ ಓವರ್ ಲೋಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಅಲ್ಲದೆ ಸೆಪ್ಟೆಂಬರ್ 1 ರಿಂದ ನಮ್ಮ ಸಂಘ ಓವರ್ ಲೋಡ್ ಹಾಕದಿರಲು ನಿರ್ಧರಿಸಿದೆ ಎಂದರು.

ಡೀಸೆಲ್ ಬೆಲೆ ಹೆಚ್ಚಳ ಹಾಗೂ ಕೊರೊನಾ ಕಾರಣದಿಂದ ಹಲವು ಲಾರಿಗಳನ್ನು ಮುಟ್ಟುಗೋಲು ಹಾಕಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ ಬಾಡಿಗೆ ದರ ನಿಗದಿಪಡಿಸಬೇಕೆಂದು ಒತ್ತಾಯಿಸಿದ ಅವರು, ಲೋಡ್ ಮತ್ತು ಅನ್ ಲೋಡಿಂಗ್ ಇಲ್ಲ ಎನ್ನುವುದನ್ನು ಸರಕು ಸಾಗಣೆದಾರರಿಗೆ ಪತ್ರವನ್ನು ನೀಡಬೇಕಿರುವುದು ಕಡ್ಡಾಯವಾಗಿದೆ ಎಂದು ಅವರು ತಿಳಿಸಿದರು.

ಟೋಲ್‌ಗಳಲ್ಲಿ ಸ್ಥಳೀಯವಾಗಿ ಸಂಚರಿಸುವ ಲಾರಿಗಳಿಗೂ ಟೋಲ್ ಶುಲ್ಕ ವಿಧಿಸಲಾಗುತ್ತಿದೆ. ಇದನ್ನು ಕೈಬಿಡಬೇಕೆಂದು ಮನವಿ ಮಾಡಿದ ಅವರು, ಓವರ್ ಲೋಡ್‌ನಿಂದಾಗಿ ಲಾರಿಗಳಿಗೂ ಕೆಲಸವಿಲ್ಲ ಹಾಗೂ ರಸ್ತೆ ಹಾಳಾಗುವುದರಿಂದ ಓವರ್ ಲೋಡ್ ತಪ್ಪಿಸಬೇಕು ಎಂದು ಮನವಿ ಮಾಡಿದರು.2020–21 ನೇ ಸಾಲಿನಲ್ಲಿ ಅಪಘಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಕಡಿಮೆಯಾಗಿರುವುದರಿಂದ ವಿಮೆ ಹಣದಲ್ಲಿ ನಿಗದಿತ ಹಣವನ್ನು ವಿಮೆದಾರರಿಗೆ ವಾಪಾಸ್ ನೀಡಬೇಕೆಂದು ಮನವಿ ಮಾಡಿದ ಅವರು, ಗುಣಮಟ್ಟದ ರಸ್ತೆಗಳು ಹಾಳಾಗಲುಓವರ್ ಲೋಡ್ ಸಮಸ್ಯೆ ಕಾರಣ, ಮಂಗಳೂರು ಬಂದರಿನಿಂದ 30 ಸಾವಿರ ಟನ್ ಅನ್ನು ಕೇವಲ 900 ಲಾರಿ ಕೊಂಡೊಯ್ಯುತ್ತಿವೆ ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎಂದರು.

ಮಹಿಳೆ ಆತ್ಮಹತ್ಯೆ

ಕನಕಪುರ.ಆ20:ಮಹಿಳೆಯೊಬ್ಬರು ತಮ್ಮ ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ತಾಲ್ಲೂಕಿನ ಹುಲಿಬೆಲೆ ಗ್ರಾಮದ ಸಮೀಪದ ಬೊಮ್ಮಣ್ಣನಗುಡ್ಡ ಪಕ್ಕದಲ್ಲಿ ನಡೆದಿದೆ.

ಮೃತರನ್ನು ಬೆಂಗಳೂರಿನ ಹೆಸರಘಟ್ಟದ ಕರಿಬಸವಯ್ಯನ ಪತ್ನಿ ಸಂಗೀತ.ಎಂ (28) ಎಂದು ಗುರುತಿಸಲಾಗಿದೆ. ಗುರುವಾರ ಮಧ್ಯಾಹ್ನ ತಮ್ಮ ಹೊಸ ಸ್ಕೂಟಿಯಲ್ಲಿ ಹುಲಿ ಬೆಲೆ ಸಮೀಪದ ಬೊಮ್ಮಣ್ಣನಗುಡ್ಡೆ ಬಳಿ ಮೊಬೈಲ್ ಫೋನ್‌ನಲ್ಲಿ ಮಾತನಾಡಿ ಕೊಂಡಿದ್ದನ್ನು ಸ್ಥಳೀಯರು ನೋಡಿದ್ದಾರೆ. ಸುಮಾರು 2–30 ರ ಸಮಯದಲ್ಲಿ ಜೋರಾಗಿ ಕಿರಿಚಿಕೊಳ್ಳುತ್ತಿರುವಶಬ್ದ ಬರುತ್ತಿದ್ದಾಗ ಅಲ್ಲಿಗೆ ಹೋಗಿ ನೋಡಿದಾಗ ಬೆಂಕಿಯ ಜ್ವಾಲೆಯಲ್ಲಿ ಸುಡುತ್ತಿದ್ದನ್ನು ಗಮನಿಸಿ ಬೆಂಕಿಯಿಂದ ರಕ್ಷಣೆ ಮಾಡಿರುವ ಸ್ಥಳೀಯರು ಗ್ರಾಮಾಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ಟಿ.ಟಿ.ಕೃಷ್ಣ ಮತ್ತು ಗ್ರೇಡ್–2 ತಹಶೀಲ್ದಾರ್ ಶಿವಕುಮಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ತೀವ್ರವಾಗಿ ಗಾಯಗೊಂಡು ಪ್ರಜ್ಞೆ ತಪ್ಪಿದ್ದ ಸಂಗೀತ ಅವರನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಿದ್ದು ಮಾರ್ಗ ಮಧ್ಯದಲ್ಲಿ ಸಾವನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮಹಿಳೆಯು ತಂದಿದ್ದ ಸ್ಕೂಟಿಪೆಪ್ ನ್ನು ಪೊಲೀಸರು ವಶಕ್ಕೆ ಪಡೆದಿದ್ದು ಅವರ ಬಳಿಯಿದ್ದ ಮೊಬೈಲ್‌ನಿಂದ ಕುಟುಂಬದವರಿಗೆ ಮಾಹಿತಿ ನೀಡಿದ್ದು ಘಟನೆ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉಯ್ಯಾಲೆಯಲ್ಲಿ ಸಿಲುಕಿ ಮಕ್ಕಳ ಸಾವು

ಮುಳಬಾಗಿಲು ಆ 19: ತಾಲೂಕಿನ ಮುಷ್ಟೂರು ಗ್ರಾಪಂ ವ್ಯಾಪ್ತಿಯ ಪೆದ್ದೂರು ಗ್ರಾಮದಲ್ಲಿ ಮನೆಯ ಚಾವಣಿಯ ಕಬ್ಬಿಣದ ತುಂಡುಗಳಿಗೆ ಸೀರೆಯಿಂದ ಉಯ್ಯಾಲೆ ಹಾಕಿದ್ದು ಇಬ್ಬರು ಮಕ್ಕಳು ಉಯ್ಯಾಲೆಯಲ್ಲಿ ಸಿಕ್ಕಿಕೊಂಡು ಉಸಿರುಗಟ್ಟಿ ಅಶೋಕ್‌ರೆಡ್ಡಿ ಪುತ್ರಿ ಮೇಘನಾ (12) ಮೃತಪಟ್ಟಿದ್ದು ಮತ್ತೊಬ್ಬ ಬಾಲಕಿ ದೇವಿಶ್ರೀ ಸ್ಥಿತಿ ಚಿಂತಾಜನಕವಾಗಿದ್ದು ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಗೆ ದಾಖಲಿಸಿರುವ ಘಟನೆ ಮಂಗಳವಾರ ನಡೆದಿದ್ದು ಈ ಬಗ್ಗೆ ನಂಗಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಇಬ್ಬರು ನಂಗಲಿ ಸಮೀಪದ ಖಾಸಗಿ ಶಾಲೆಯಲ್ಲಿ 6ನೇ ತರಗತಿ ವಿದ್ಯಾರ್ಥಿಗಳಾಗಿದ್ದು ದೇವಿಶ್ರೀ ಶಿಕ್ಷಣ ಪಡೆಯಲು ಅಜ್ಜಿ ಮನೆಗೆ ಶ್ರೀನಿವಾಸಪುರ ತಾಲೂಕಿನ ಯಮನೂರು ಗ್ರಾಮದಿಂದ ಆಗಮಿಸಿದ್ದಳು ಎನ್ನ